ಓ.ಎಸ್.126/2023
ಪಿ.ಡಬ್ಲು-1/ಸುಜಾತ

**ದಿ: 20.07.2026 ರಂದು ವಾದಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು : ಪ್ರತಿವಾದಿ ಪರ ಶ್ರೀಯುತ ಎಫ್.ಎ. ವಕೀಲರಿಂದ.**

7. ನಾನು ವಾದ ಪತ್ರದಲ್ಲಿ ದಾವಾ ಆಸ್ತಿಯು ಸಿ.ಎಸ್.ಐ ಆಸ್ಪತ್ರೆಯ ದಕ್ಷಿಣ ದಿಕ್ಕಿನಲ್ಲಿ ಇರುತ್ತದೆ ಎಂದು ಕಾಣಿಸಿರುತ್ತೇನೆ ಎಂದರೆ ಸರಿ. ದಾವಾ ಆಸ್ತಿಯ ಪಶ್ಚಿಮ ದಿಕ್ಕಿಗೆ ಪೆತ್ತನಹಳ್ಳಿ ರಸ್ತೆ ಬರುವುದಿಲ್ಲ ಮತ್ತು ದೊಡ್ಡಗಟಿಗನಬೆ ರಸ್ತೆ ಬರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ವಾದ ಪತ್ರದಲ್ಲಿ ಕಾಣಿಸಿರುವ ಚೆಕ್ಕುಬಂದಿಯಲ್ಲಿ ಬರುತ್ತದೆ ಎನ್ನುವ ಕುರಿತು ನ್ಯಾಯಾಲಯದಿಂದ ಆಯುಕ್ತರನ್ನು ನೇಮಿಸಲು ನನಗೆ ಅಭ್ಯಂತರ ಇರುವುದಿಲ್ಲ. ನಾನು ವಾದ ಪತ್ರದಲ್ಲಿ ಕಾಣಿಸಿರುವ ವ್ಯಾಜ ಕಾರಣದ ದಿನಾಂಕದ ಪೂರ್ವದಲ್ಲಿ ಮತ್ತೊಂದು ವ್ಯಾಜಕಾರಣದ ಕುರಿತು ಮೂಲದಾವೆ ಸಂಖ್ಯೆ 95/2023 ದಾವೆ ದಾಖಲಿಸಲಾಗಿರುತ್ತದೆ ಎಂದರೆ ಸಾಕ್ಷಿಯು ಸದರಿ ಮೂಲದಾವೆ ಸಂಖ್ಯೆ 95/2023 ಮತ್ತು ಪ್ರಸ್ತುತ ದಾವೆಯ ಆಸ್ತಿಗಳು ಬೇರೆ ಬೇರೆ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಯನ್ನು ಖರೀದಿಸುವ ಪೂರ್ವದಲ್ಲಿ ಯಾವುದೇ ಸಾರ್ವಜನಿಕ ಪ್ರಕಟಣೆಯನ್ನು ನೀಡಿರುವುದಿಲ್ಲ. ನಾನು ಬೇರೆಯವರ ಆಸ್ತಿಯಲ್ಲಿ ಮನೆ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ.ಸ.ಇದೆ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಹೊಸಕೋಟೆ.